ಓಎಸ್ ನಂ. 181/2014
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕಃ-24.02.2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಶ್ರೀ ಹೆಚ್.ಬಿ.ಜಿ.ಕೆ. ವಕೀಲರಿಂದ</u>**

**5.** ಈ ದಾವೆಯನ್ನು ನಾನು ನನ್ನ ತಂದೆ, ಅಣ್ಣ, ಅಕ್ಕ ಮತ್ತು ಬಸವರಾಜು ಎಂಬುವವರ ಮೇಲೆ ಹಾಕಿದ್ದೇನೆ. ನನ್ನ ತಾತನ ಆಸ್ತಿಯಲ್ಲಿ ನನಗೆ ಭಾಗ ಕೊಡಬೇಕು ಎಂದು ಈ ದಾವೆ ಹಾಕಿದ್ದೇನೆ. ನಾನು ಬಿ.ಎ.ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ತುಮಕೂರಿನ ಎಂ.ಎ.ಆರ್.ಪಿ ಪೊಲೀಸ್ ಕ್ವಾಟ್ರರ್ಸ್ ಶಾಲೆಯಲ್ಲಿ ಓದಿದ್ದೇನೆ. 8 ರಿಂದ 10 ನೇ ತರಗತಿಯವರೆಗೆ ತುಮಕೂರಿನ ಶೆಟ್ಟಿಹಳ್ಳಿ ನೃಪತುಂಗ ಫ್ರೌಢಶಾಲೆಯಲ್ಲಿ ಓದಿದ್ದೇನೆ. ಪಿಯುಸಿಯನ್ನು ವಿದ್ಯಾವಾಹಿನಿ ಕಾಲೇಜು ಮತ್ತು ಪದವಿಯನ್ನು ಸರ್ಕಾರಿ ಕಾಲೇಜು ತುಮಕೂರಿನಲ್ಲಿ ಓದಿದ್ದೇನೆ. 2000 ನೇ ಇಸವಿಯಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾಗಿರುತ್ತೇನೆ. ಹದಿನೆಂಟುವರೆ ವರ್ಷ್ಕೆ ದ್ವಿತೀಯ ಪಿಯುಸಿ ಮುಗಿಸಿದ್ದೇನೆ. 2003-04 ನೇ ಇಸವಿಯಲ್ಲಿ ಪದವಿಯ ಅಂತಿಮ ವರ್ಷದಲ್ಲಿದ್ದೆ. ನಾನು ಪದವಿ ಓದುವ ಕಾಲಕ್ಕೆ ನನ್ನ ತಂದೆ-ತಾಯಿಯ ಜೊತೆ ವಾಸವಿದ್ದೆ. ಈಗಲೂ ಸಹ ನನ್ನ ತಂದೆ-ತಾಯಿಯೊಂದಿಗೆ ವಾಸವಿದ್ದೇನೆ.

**6.** ನಮ್ಮ ತಂದೆ ನಮ್ಮ ಕುಟುಂಬದ ಪಾಲನೆ ಪೋಷಣೆಯನ್ನು ಸರಿಯಾಗಿ ಮಾಡುತ್ತಿರಲಿಲ್ಲ. ನನ್ನ ತಾಯಿಯೇ ಮಾಡುತ್ತಿದ್ದರು. ನನ್ನ ತಾಯಿ ಮನೆಯಲ್ಲಿಯೇ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ನಮ್ಮ ಕುಟುಂಬ ನಿರ್ವಹಣೆಗಾಗಿ ನನ್ನ ತಂದೆ ಸಾಕಷ್ಟು ಹಣ ವ್ಯಯ ಮಾಡಿದ್ದಾರೆ ಎಂದರೆ ತಿಂಗಳಿಗೆ ರೇಷನ್ ಮಾತ್ರ ತಂದು ಹಾಕುತ್ತಿದ್ದರು ಬೇರೆ ಯಾವುದೇ ವ್ಯವಹಾರ ನಮಗೆ ತಿಳಿಸುತ್ತಿರಲಿಲ್ಲ. ತಮ್ಮ ದುಡಿಮೆಯಿಂದಲೇ ನಮ್ಮ ತಂದೆ ನಮ್ಮ ಶಿಕ್ಷಣ ಮತ್ತು ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪೊಲೀಸ್ ಇಲಾಖೆಯಲ್ಲಿ ದಫೇದಾರ್ ಆಗಿ ನಿವೃತ್ತಿ ಹೊಂದಿರುತ್ತಾರೆ. ತಮ್ಮ ಮಕ್ಕಳು ಮದುವೆಯ ಖರ್ಚು-ವೆಚ್ಚವನ್ನು ನನ್ನ ತಂದೆ ನಿರ್ವಹಿಸಿದ್ದಾರೆ ಎಂದರೆ ಸರಿಯಲ್ಲ.

**7.** ಈ ದಾವೆಯನ್ನು ಒಂದು ಆಸ್ತಿಯ ಬಗ್ಗೆ ಹಾಕಿದ್ದೇನೆ. ಅದರ ವಿಸ್ತೀರ್ಣ 1 ಎಕರೆ 17 ಗುಂಟೆ ಇರುತ್ತದೆ. ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದಾಗ ನನಗೆ 21 ರಿಂದ 22 ವರ್ಷ ವಯಸ್ಸಾಗಿತ್ತು. ಈಗ ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿ ಇಲ್ಲಿನ 4 ನೇ

ಪ್ರತಿವಾದಿಯಾಗಿರುತ್ತಾರೆ. ಇದೇ 4 ನೇ ಪ್ರತಿವಾದಿಗೆ ದಾವಾ ಸ್ವತ್ತು ಮಾರಾಟವಾಗಿದೆ ಎಂದು ವಾದ ಪತ್ರದಲ್ಲಿ ಹೇಳಿದ್ದೇನೆ. ಎಷ್ಟು ಹಣಕ್ಕೆ ದಾವಾ ಸ್ವತ್ತನ್ನು 4 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ನಾನು ಹಾಜರು ಮಾಡಿದ್ದೇನೆ. ಅದರಲ್ಲಿ 1,25,500/- ರೂ. ಎಂದು ನಮೂದಾಗಿರುತ್ತದೆ. ( ಸಾಕ್ಷಿ ನಿಪಿ-4 ನ್ನು ನೋಡಿ ಹೇಳಿರುತ್ತಾರೆ.) ನಿಪಿ-6 ರಲ್ಲಿ ದಾವಾ ಸ್ವತ್ತನ್ನು ಗೃಹ ಕೃತ್ಯದ ದರದ ನಿಮಿತ್ತವಾಗಿ ನನಗೆ ಹಣದ ತೊಂದರೆ ಇರುವುದರಿಂದ ಮಾರಾಟ ಮಾಡುತ್ತಿದ್ದೇನೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಿಪಿ-6 ರಲ್ಲಿನ 1 ನೇ ಪುಟದಲ್ಲಿನ 7 ನೇ ಸಾಲುಗಳನ್ನು ಓದಿ ನಂತರ ಆ ರೀತಿ ನಮಗೆ ಹಣದ ತೊಂದರೆ ಇರಲಿಲ್ಲ ಎನ್ನುತ್ತಾರೆ. ನಿಪಿ-6 ರ 3 ನೇ ಪುಟದಲ್ಲಿ ನವೀನ್‌ರವರು ಸಹ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ಬರೆದಿದೆ ಎಂದರೆ ನವೀನ್ ಎಂಬ ಹೆಸರನ್ನು ಮೇಲೆ ಸೇರಿಸಿದ್ದು ನಾನು ಆ ದಿನ ಹಾಜರಿರಲಿಲ್ಲ ಎಂದು ನುಡಿಯುತ್ತಾರೆ.

**8.** ನಿಪಿ-6 ನ್ನು ನಾನು ನೊಂದಣಾಧಿಕಾರಿಗಳ ಕಛೇರಿಯಿಂದ 2014 ರಲ್ಲಿ ಪಡೆದುಕೊಂಡು ಇಲ್ಲಿ ಹಾಜರು ಮಾಡಿದ್ದೇನೆ. ಅವರು ನೀಡಿದ ನೊಂದಾಯಿತ ಪ್ರತಿಯನ್ನೇ ಇಲ್ಲಿ ಹಾಜರು ಮಾಡಿರುತ್ತೇನೆ. ಅದರಲ್ಲಿ ನನ್ನ ತಂದೆಯ ಛಾಯಾಚಿತ್ರ ಇದೆ. ಅದರಲ್ಲಿ ಇರುವ ಇನ್ನೊಂದು ಛಾಯಾಚಿತ್ರ ಯಾರದ್ದು ಎಂದರೆ ನನಗೆ ಗೊತಿಲ್ಲ. ಅದು ಇಲ್ಲಿನ 4 ನೇ ಪ್ರತಿವಾದಿಯ ಛಾಯಾಚಿತ್ರ ಎಂದರೆ ಇರಬಹುದು. ನೊಂದಣಿ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿ ಸಾಕ್ಷಿಗಳ ಸಾಲಿನಲ್ಲಿ ಇರುವ 3 ನೇ ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಹಿ ನನ್ನದೇ ಆಗಿದ್ದರೂ ಅದನ್ನು ಒಪ್ಪಿಕೊಂಡರೆ ದಾವಾ ಸ್ವತ್ತಿನಲ್ಲಿ ನನಗೆ ಭಾಗ ಸಿಗುವುದಿಲ್ಲ ಎಂಬ ಒಂದೇ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ಮುಖ್ಯ ವಿಚಾರಣೆಯಲ್ಲಿ ಕ್ರಯ ಪತ್ರದಲ್ಲಿನ ಸಹಿ ನನ್ನದಲ್ಲ ಎಂದು ಹೇಳಿ ಬರೆಸಿರುತ್ತೇನೆ.

**9.** ದಾವಾ ಸ್ವತ್ತಿನ ಖಾತೆ-ಪಹಣಿ ನನ್ನ ತಂದೆಯ ಹೆಸರಿನಲ್ಲಿದೆ. ನಾವೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇವೆ. ಕ್ರಯ ಪತ್ರದಂತೆ 4 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬಂದಿದ್ದು ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೂ ನ್ಯಾಯಾಲಯದ ಶುಲ್ಕ ಕೊಡುವುದನ್ನು ತಪ್ಪಿಸಲು ನಾನೇ ಸ್ವಾಧೀನದಲ್ಲಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಿರುದ್ಧ ಮೋಸ

ಮಾಡಿದ್ದಾರೆ ಎಂದು ಯಾವುದೇ ದೂರು ನೀಡಿಲ್ಲ. ನನ್ನ ತಂದೆಯ ವಿರುದ್ಧ ದೂರು ನೀಡಿದರೆ ನಿಪಿ-6 ರಲ್ಲಿನ ಸಹಿ ನನ್ನದೇ ಎಂದು ಸತ್ಯ ಹೊರಬರುತ್ತದೆ ಎಂದು ಯಾವುದೇ ದೂರನ್ನು ನೀಡಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ರಿಂದ 3 ನೇ ಪ್ರತಿವಾದಿ ಸೇರಿ ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

**10.** ಸಾಕ್ಷಿಗೆ ವಕೀಲರು ಈಗ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿನ ಸಹಿಯನ್ನು ನೋಡಿ ತನ್ನ ಸಹಿ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆ ದಿಃ17.11.2021 ರ ಆರಕ್ಷಕ ವೃತ್ತ ನಿರೀಕ್ಷಕರು ಕೊರಟಗೆರೆರವರ ಎದುರು, ಎದುರು ಅರ್ಜಿದಾರರು ನೀಡಿರುವ ಹೇಳಿಕೆಯಾಗಿದ್ದು ಸಾಕ್ಷಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿರುವ ಕಾರಣ ಸದರಿ ದಾಖೆಯನ್ನು ನಿಡಿ-3 ಎಂದು ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಡಿ-3(ಎ) ಎಂದು ಗುರುತಿಸಲಾಯಿತು. ಯಾವ ವಿಚಾರಕ್ಕೆ ಸದರಿ ಸಹಿ ಮಾಡಿದ್ದೀರಿ ಎಂದರೆ ಜಮೀನಿನ ವಿಚಾರದಲ್ಲಿ ಜಮೀನಿನ ಬಳಿ ಬರಬಾರದು ಎಂದು 4 ನೇ ಪ್ರತಿವಾದಿ ಪೊಲೀಸರಿಗೆ ದೂರು ನೀಡಿದ್ದು ಆಗ ಪೊಲೀಸ್ ಠಾಣೆಗೆ ಬಂದಿದ್ದಾಗ ಖಾಲಿ ಪತ್ರಕ್ಕೆ ಸದರಿ ಸಹಿಯನ್ನು ಪಡೆದುಕೊಂಡಿದ್ದರು ಎಂದಿದ್ದಾರೆ. ಸದರಿ ದಾಖಲೆಯು ಸಂಪೂರ್ಣ ತಯಾರಾದ ಮೇಲೆ ನಾನು ಅದನ್ನು ಓದಿ ನೋಡಿಯೇ ಸಹಿ ಮಾಡಿದ್ದರೂ ಹೌದು ಎಂದರೆ ಸತ್ಯ ಹೊರಬರುತ್ತದೆ ಎಂದು ಖಾಲಿ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡರು ಎಂದು ಪೊಲೀಸ್ ಮೇಲಾಧಿಕಾರಿಗಳಿಗೆ ದೂರು ನೀಡಿಲ್ಲ. ನಿಡಿ-3 ನಾನೇ ಹೇಳಿ ಬರೆಯಿಸಿದ ಹೇಳಿಕೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-3 ರಲ್ಲಿರುವ ಇನ್ನೊಂದು ಸಹಿ ನನ್ನ ಅಣ್ಣ ಉಮಾಶಂಕರ್‌ರವರದ್ದು ಆಗಿರುತ್ತದೆ. ನನ್ನ ಅಣ್ಣ ಸಹ ನನ್ನೊಂದಿಗೆ ಹೇಳಿಕೆ ನೀಡಿ ಸದರಿ ದಾಖಲೆಗೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**11.** ದಾವಾ ಸ್ವತ್ತನ್ನು ಬಿಟ್ಟರೆ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿ ಇಲ್ಲ. 1 ರಿಂದ 3 ನೇ ಪ್ರತಿವಾದಿಯರೊಂಗೆ ಷರೀಕಾಗಿ 4 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿದಾಗಿನಿಂದ ದಾವಾ 1 ನೇ ಐಟಂ ಆಸ್ತಿಯಲ್ಲಿ ನಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ನನ್ನ ತಾಯಿಯ ಸಹಿ ಇರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲ. ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓಎಸ್ ನಂ.    181/2014
ಪಿ ಡಬ್ಲ್ಯೂ -1

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಾಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**